O.S. ನಂಬರಃ 43/2021

ಪಿ. ಡಬ್ಲ್ಯೂಃ 1

ದಿಃ 17-09-2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟಿ ಸವಾಲುಃ ಪ್ರತಿವಾದಿಯ ಪರ ವಕೀಲರಾದ ಶ್ರೀಮತಿ ಎಸ್ ಎನ್ ಹೆಚ್ ಇವರಿಂದಃ

ನೀವು ಎಲ್ಲಿ ವಾಸ್ತವ್ಯ ಇರುತ್ತೀರಿ ಎಂದರೆ ಸಾಕ್ಷಿಯು ಕಾನ್ ತೋಟ ಮತ್ತಿಘಪಿಟ್ಟ, ಶಿರಸಿ ತಾಲೂಕಿನಲ್ಲಿ ಇರುತ್ತೇವೆ ಎಂದು ನುಡಿಯುತ್ತಾರೆ. ಎಷ್ಟು ವರ್ಷಗಳಳಿಂದ ಅಲ್ಲಿ ಇರುತ್ತೀರಿ ಎಂದರೆ ಸಾಕ್ಷಿಯು 10-15 ವರ್ಷಗಳಿಂದ ವಾಸ ಮಾಡುತ್ತಿದ್ದೇವೆ ಎಂದು ನುಡಿಯುತ್ತಾರೆ. ಅಲ್ಲಿ ನಿಮಗೆ ಎಷ್ಟು ಜಮೀನು ಇರುತ್ತದೆ ಎಂದರೆ ಸಾಕ್ಷಿಯು ಒಂದು ಎಕರೆ ಇರುತ್ತದೆ ಎಂದು ನುಡಿಯುತ್ತಾರೆ. ಸರಕಾರದಿಂದ ಮಂಜೂರಾದಂತಹ ಜಮೀನಾ ಎಂದರೆ ಹೌದು ಎಂದು ನುಡಿಯುತ್ತಾರೆ. ಅದರ ಸರ್ವೆ ನಂಬರು ಎಷ್ಟು ಎಂದರೆ ಸಾಕ್ಷಿಯು ಸರ್ವೆ ನಂ.84 ಕ್ಷೇತ್ರ 1 ಎಕರೆ 14 ಗುಂಟೆ ಇರುತ್ತದೆ. ನೀವು ಕಮ್ಮಾಣಿ ಯಲ್ಲಿ ವಾಸ್ತವ್ಯ ಮಾಡಿರಬೇಕಾದರೆ ಯಾರ ಮನೆಯಲ್ಲಿ ಇದ್ದೀರಿ ಎಂದರೆ ಸಾಕ್ಷಿಯು ಕಮ್ಮಾಣಿಯಲ್ಲಿ ಮುದ್ರಪಾಲ್ ದಲ್ಲಿ ಇತ್ತು ಎಂದು ನುಡಿಯುತ್ತಾರೆ. ಅದು ಸರಕಾರದ ಅತಿಕ್ರಮಣ ಜಮೀನು ಆಗಿತ್ತು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು, ಅದು ಗೇಣಿ ಜಮೀನು ಎಂದು ನುಡಿಯುತ್ತಾರೆ. ಜಮೀನು ಯಾವ ಸರ್ವೆ ನಂಬರಿನಲ್ಲಿ ಇತ್ತು ಎಂದರೆ ಸಾಕ್ಷಿಯು ಸರ್ವೆ ನಂ.13/2 ರಲ್ಲಿ ಇತ್ತು ಎಂದು

ನುಡಿಯುತ್ತಾರೆ. ಮನೆ ನಂಬರು ಎಷ್ಟು ಎಂದರೆ ಸಾಕ್ಷಿಯು 10 ಎಂದು ನುಡಿಯುತ್ತಾರೆ. ನಮ್ಮ ತಂದೆಯ ಹೆಸರಿನಲ್ಲಿ ಇತ್ತು ಎಂದು ನುಡಿಯುತ್ತಾರೆ. ನಿಮ್ಮ ತಂದೆಯ ಹೆಸರಿನಲಿದ್ದ ಮನೆ ಈಗ ಬಿದ್ದು ಹೋಗಿರುತ್ತದೆ ಎಂದರೆ ಸರಿ. ಸದರಿ ಮನೆಯು ಸರ್ವೆ ನಂ.13/2 ರಲ್ಲಿ ಇತ್ತು ಎಂದು ಹೇಳಲು ಕಾಗದ ಪತ್ರವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸದರಿ ಮನೆಯು ಬಿದ್ದು ಹೋಗಿ ಎಷ್ಟು ವರ್ಷಗಳು ಆಗಿರುತ್ತವೆ ಎಂದರೆ ಸಾಕ್ಷಿಯು ಸುಮಾರು 30 ವರ್ಷಗಳು ಆಗಿರುತ್ತವೆ ಎಂದು ನುಡಿಯುತ್ತಾರೆ. ಸದರಿ ಮನೆ ಬಿದ್ದ ನಂತರ ಅದನ್ನು ಯಾರೂ ಸಹ ರಿಪೇರಿ ಮಾಡಿರುವುದಿಲ್ಲ ಎಂದರೆ ಸರಿ. ಸದರಿ ಮನೆಯು ಸರಕಾರದ ಅತಿಕ್ರಮಣ ಜಮೀನಿನಲ್ಲಿ ಇತ್ತು ಎಂದರೆ ಸರಿಯಲ್ಲ. ನಿಮ್ಮ ತಮ್ಮ ಶಿವಪ್ಪ ಎಲ್ಲಿ ಇರುತ್ತಾರೆ ಎಂದೆರ ಸಾಕ್ಷಿಯ ಕಮ್ಮಾಣಿಯ ದೊಡ್ಡಕಟ್ಟು ನಲ್ಲಿ ವಾಸ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ಈಗ ಅವನು ಅತಿಕ್ರಮಣ ಜಮೀನಿನಲ್ಲಿ ವಾಸ ಮಾಡಿಕೊಂಡು ಇರುತ್ತಾನೆ ಎಂದರೆ ಸರಿ. ಅತಿಕ್ರಮಣ ಜಮೀನಿನಲ್ಲಿ ಯಾರು ಯಾರು ಇರುತ್ತಾರೆ ಎಂದರೆ ಸಾಕ್ಷಿಯು ಅವರ ಹೆಂಡತಿ ಮತ್ತು ಮಕ್ಕಳು ಇರುತ್ತಾರೆ ಎಂದು ನುಡಿಯುತ್ತಾರೆ. ಅವರಿಗೆ ಅರಣ್ಯ ಇಲಾಖೆಯವರು ಬುಡಕಟ್ಟು ಜನಾಂಗದವರೆಗೆ ಹಕ್ಕು ಪತ್ರ ಕೊಟ್ಟಿರುತ್ತಾರೆ ಎಂದರೆ ಸರಿ. ಅದು ಬ್ಲಾಕ್ ನಂ.6 ಕ್ಷೇತ್ರ 3 ಎಕರೆ 26 ಗುಂಟೆ ಎಂದರೆ ಗೊತ್ತಿರುವುದಿಲ್ಲ. ಅದು ಕಮ್ಮಾಣಿಯಲ್ಲಿ ಇರುತ್ತದೆ ಎಂದರೆ ಸರಿ. ಮಂಜೂರಿಯಾದ ಜಮೀನಿನಲ್ಲೇ ನಿಮ್ಮ ಮನೆ ಇತ್ತು ಎಂದರೆ ಸಾಕ್ಷಿಯು ಮನೆ ಇತ್ತು, ಆದರೆ ನಾವು ಅಲ್ಲಿ ವಾಸ್ತವ್ಯ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು, 6ನೇ ಪ್ರತಿವಾದಿ ಮತ್ತು ನಾಗು ಈತನ ಮಕ್ಕಳು

ಅತಿಕ್ರಮಣ ಜಮೀನಿನಲ್ಲಿ ಮನೆ ಕಟ್ಟಿಕೊಂಡು ವಾಸಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. 3ನೇ ಪ್ರತಿವಾದಿ ಎಲ್ಲಿ ಇರುತ್ತಾನೆ ಎಂದರೆ ಸಾಕ್ಷಿಯು ಮೂದ್ರಪಾಲ್ ನಲ್ಲಿ ವಾಸ್ತವ್ಯ ಮಾಡುತ್ತಿದ್ದಾನೆ ಎಂದು ನುಡಿಯುತ್ತಾರೆ. ಅವರು ಯಾವ ಜಮೀನಿನಲ್ಲಿ ಇರುತ್ತಾನೆ ಎಂದರೆ ಸಾಕ್ಷಿಯು ಸರ್ವೆ ನಂ.13/2 ರಲ್ಲಿ ಇರುತ್ತಾನೆ ಎಂದು ನುಡಿಯುತ್ತಾರೆ. ನಾಗು ಸಿದ್ಧಿಗೆ ಎಷ್ಟು ಜನ ಗಂಡುಮಕ್ಕಳು ಎಂದರೆ ಸಾಕ್ಷಿಯು 3 ಜನ ಗಂಡು ಮಕ್ಕಳು, ಇಬ್ಬರು ಹೆಣ್ಣುಮಕ್ಕಳು ಎಂದು ನುಡಿಯುತ್ತಾರೆ. ಮಂಜುನಾಥ ಸಿದ್ಧಿ ಈತನು ಸರ್ವೆ ನಂ.13/2 ರಲ್ಲಿ ಮನೆ ಕಟ್ಟಿಕೊಂಡು ಇರುತ್ತಾನೆ ಎಂದರೆ ಸರಿ. ಮನೆ ಕಟ್ಟಿ ಎಷ್ಟು ವರ್ಷಗಳು ಆಗಿರುತ್ತವೆ ಎಂದರೆ ಸಾಕ್ಷಿಯ 20 ವರ್ಷಗಳು ಆಗಿರುತ್ತವೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ಸುಬ್ರಾಯ್ ಸಿದ್ದಿ ಈತನಿಗೆ ಭೂ-ನ್ಯಾಯಮಂಡಳಿಯಿಂದ ಮಂಜೂರಾದ ಜಮೀನು ಎಂದರೆ ಸರಿ. ಸದರಿ ಜಮೀನು ತೋಟ್ಯಾ ಸಿದ್ಧಿ ಇವರ ಹೆಸರಿಗೆ ಇತ್ತ ಎಂದು ತೋರಿಸಲು ದಾಖಲಾತಿ ಇರುವುದಿಲ್ಲ ಎಂದರೆ ಸಾಕ್ಷಿಯು ತೋಟ್ಯಾ ಸಿದ್ಧಿ ಮಾಡಿರುವುದಿಲ್ಲ, ನಾಗು ತೋಟ್ಯಾ ಸಿದ್ಧಿ ಮತ್ತು ಬೆಳ್ಳಾ ತೋಟ್ಯಾ ಸಿದ್ಧಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ತೋಟ್ಯಾ ಸಿದ್ದಿ ಇವರಿಂದ ಬಂದಿರುತ್ತದೆ ಎಂದು ವಕೀಲರಿಗೆ ಮಾಹಿತಿ ಕೊಟ್ಟಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. 1973 ರ ಪೂರ್ವದಲ್ಲಾಗಲಿ ಅಥವಾ ನಂತರದಲ್ಲಾಗಲಿ ನಾಗು ಸಿದ್ದಿ ಸದರಿ ದಾವಾ ಆಸಿಯನ್ನು ಸಾಗುವಳಿ ಮಾಡುತ್ತಿದ್ದನು ಎಂದು ಯಾವುದೇ ದಾಖಲಾತಿ ಇರುವುದಿಲ್ಲ ಎಂದರೆ ಸಾಕ್ಷಿಯು ರೆಕಾರ್ಡ ಇರುತ್ತದೆ ಎಂದು ನುಡಿಯುತ್ತಾರೆ. ನಾಗು ತೋಟ್ಯಾ ಸಿದ್ಧಿ ಇವರಿಂದ ಬಂದಿದೆ ಎಂದು ತೋರಿಸಲು

ರೆಕಾರ್ಡನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಾಗು ತೋಟ್ಯಾ ಸಿದ್ದಿ ಇವರು ಮತ್ತಿಗಟ್ಟದಲ್ಲಿ ಎಷ್ಟು ವರ್ಷದಿಂದ ಇದ್ದ ಎಂದರೆ ಸಾಕ್ಷಿಯು ಹೋಗಿ ಬಂದು ಮಾಡುತ್ತಿದ್ದ ಎಂದು ನುಡಿಯುತ್ತಾರೆ. ನಿಮ್ಮ ತಂದೆ ಮತ್ತು ತಾಯಿ ಮತ್ತಿಗಟ್ಟದಲ್ಲೇ ಮರಣಪಟ್ಟಿರುತ್ತಾರೆ ಎಂದರೆ ಸಹಿಯಲ್ಲ. ಭೂ-ನ್ಯಾಯಮಂಡಳಿಯ ಮಂಡಳಿಯಿಂದ ಆದೇಶ ಆಗುವ ಪೂರ್ವದಲ್ಲಿ ನಿಮ್ಮ ತಂದೆಯು ಸದರಿ ಜಮೀನಿನಲ್ಲಿ ಸಾಗುವಳಿ ಮಾಡುತ್ತಿದ್ದನು ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ನೀಲು ನಾರಾಯಣ ಇವರಿಗೆ ಸಂಬಂಧಪಟ್ಟಿದ್ದು ಆಗಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಜಮೀನು ಭೂ-ನ್ಯಾಯಮಂಡಳಿಯಿಂದ ಬರುವ ಮೊದಲು ನೀಲು ನಾರಾಯಣ ಇವರು 4 ಎಕರೆ 22 ಗುಂಟೆ ಮತ್ತು ಬೆಳ್ಳಾ ಈತನು 4 ಎಕರೆ 19 ಗುಂಟೆ ಜಮೀನನ್ನು ಗೇಣಿ ನಾತೆಯಿಂದ ಸಾಗುವಳಿ ಮಾಡುತ್ತಿದ್ದ ಎಂದರೆ ಸರಿಯಲ್ಲ. ಸುಬ್ರಾಯ ಸಿದ್ದಿ ಇವರು ನೀಲು ನಾರಾಯಣ ಈತನ ಹತ್ತಿರ ಪೂರ್ತ ಮೂಲಗೇಣಿ ಮಾಡಿಕೊಂಡಿದ್ದ ಎಂದರೆ ಸರಿಯಲ್ಲ. ಅದೇ ರೀತಿ ಸುಬ್ರಾಯ್ ಸಿದ್ದಿ ಮತ್ತು ಬೆಳ್ಳಾ ಸಿದ್ಧಿ ಇವರು ಭೂ-ನ್ಯಾಯಮಂಡಳಿಗೆ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ, ಅದರಂತೆ ಸುಬ್ರಾಯ್ ಸಿದ್ದಿ ಈತನಿಗೆ 4 ಎಕರೆ 22 ಗುಂಟೆ ಹಾಗೂ ಬೆಳ್ಳಾ ಸಿದ್ದಿ ಇವರಿಗೆ 4 ಎಕರೆ 19 ಗುಂಟೆ ಮಂಜೂರು ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ.

ನ್ಯಾಯಾಲಯದ ಅವಧಿ ಮುಗಿಸಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.